ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ).—ರ್ಗರೆನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ಸಂಬಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ರ್ಗರೆನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ಸಂಬಳ ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ಕಾರ್ಮಿಕ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈಗ ''ರ್ಗರೆನೇ ಇಸವಿಯ ಕರ್ನಾಟಕ ಧಾರ್ಮಿಕ ಕಟ್ಟಡಗಳು ಮತ್ತು ಸ್ಥಳಗಳ ವಿಧೇಯಕವನ್ನು'' ಪರ್ಯಾಲೋಚಿಸಬೇಕಾಗಿದೆ. ಈ ವಿಧೇಯಕದ ವಿಷಯವಾಗಿ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳ ಜೊತೆ ಚರ್ಚೆ ಮಾಡಿ ಇದನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಅತ್ಯಂತ ಮಹತ್ವವಾದಂತಹ ಮಸೂದೆ ಆದುದರಿಂದ ಇದನ್ನು ಮುಂದಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈ ಮಸೂದೆಯ ಚರ್ಚೆಯನ್ನು ಮುಂದಕ್ಕೆ ಹಾಕಲಾಗಿದೆ.

The Karnataka Rent Control (Amendment) Bill, 1986; (Reference to Joint Select Committee)

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ಬಾಡಿಗೆ ನಿಯಂತ್ರಣ ಕಾನೂನಿನ ಬಗ್ಗೆ ಈ ಕಡೆ ಮಂತ್ರಿ ಆ ಕಡೆ ಸದಸ್ಯರ ಅಭಿಪ್ರಾಯ. ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಬೇಕೆಂಬ ಅಭಿಪ್ರಾಯ ಮೂಡಿ ಬಂದಿದೆ. ಆದಕ್ಕಾಗಿ ''ರ್ಗರೆನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ ವಿಧೇಯಕವನ್ನು ೧೨ ಜನ ವಿಧಾನ ಸಭಾ ಸದಸ್ಯರು ಹಾಗೂ ೪ ಜನ ವಿಧಾನ ಪರಿಷತ್ತಿನ ಸದಸ್ಯರು ಹೀಗೆ ಒಟ್ಟು ೧೬ ಜನ ಸದಸ್ಯರುಗಳ ಸದನದ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದೂ ಹಾಗೂ ಅದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕೆಂದೂ ಮತ್ತು ಈ ಕೆಳಕಂಡ ಸದಸ್ಯರು ಸಂಯುಕ್ತ ಪರಿಶೀಲನಾ ಸಮಿತಿಗೆ ಸದಸ್ಯರಾಗಿರುತ್ತಾರೆ.

ಶ್ರೀಯುತರುಗಳಾದ.—

೧ ಪಿ.ಎಂ. ಚಿಕ್ಕಬೋರಯ್ಯ
೨ ಎಂ.ಎಸ್. ನಾರಾಯಣ ರಾವ್
೩ ಎಸ್.ಪಿಚ್. ಕೌಜಲಗಿ
೪ ಎಸ್.ಕೆ. ಕಾಂತಾ
೫ ಶ್ರೀಮತಿ ಡಾ॥ ಎ. ಪುಷ್ಪಾವತಿ
೬ ಮೊಹಮದ್ ಮೊಯುನುದ್ದೀನ್
೭ ಡಿ. ಜಿ. ಬಸವನಗೌಡ
೮ ಡಿ. ನಾಗರಾಜಯ್ಯ
೯ ಸಿ. ಎನ್. ಬಾಸ್ಕರಪ್ಪ
೧೦ ಧರ್ಮಸಿಂಗ್ ನಾರಾಯಣ ಸಿಂಗ್
೧೧ ಕೆ. ಎನ್. ಕೋಳಿವಾಡ್
೧೨ ಬಿ.ಎಂ. ಇದಿನಬ್ಬ

ಅಧ್ಯಕ್ಷರು.— ಈಗ ಪ್ರಸ್ತಾವನೆಯನ್ನು ಮಂತಕ್ಕೆ ಹಾಕುತ್ತೇನೆ.

''ರಿಟೈನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ ವಿಧೇಯಕವನ್ನು ೧೨ ಜನ ವಿಧಾನ ಸಭಾ ಸದಸ್ಯರು ಹಾಗೂ ೪ ಜನ ವಿಧಾನ ಪರಿಷತ್ತಿನ ಸದಸ್ಯರು ಒಟ್ಟಿನಲ್ಲಿ ೧೬ ಜನ ಸದಸ್ಯರಿರುವ ಸದನದ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಲಾಗಿದೆ.'' ಅದಕ್ಕೆ ಈ ಕೆಳಕಂಡ ಸದಸ್ಯರುಗಳು ಇರುತ್ತಾರೆ.

ಶ್ರೀಯುತರುಗಳಾದ.—

---

೧) ಪಿ. ಎಂ. ಚಿಕ್ಕಬೋರಯ್ಯ
೨) ಎಂ. ಎಸ್. ನಾರಾಯಣರಾವ್
೩) ಎಸ್. ಹೆಚ್. ಕೌಜಲಗಿ
೪) ಎಸ್. ಕೆ. ಕಾಂತಾ
೫) ಶ್ರೀಮತಿ ಡಾ. ಎ. ಪುಷ್ಪಾವತಿ
೬) ಮೊಹಮದ್ ಮೊಇನ್‌ಉದ್ದೀನ್
೭) ಡಿ. ಜಿ. ಬಸವನಗೌಡ
೮) ಡಿ. ನಾಗರಾಜಯ್ಯ
೯) ಸಿ. ಎನ್. ಭಾಸ್ಕರಪ್ಪ
೧೦) ಧರ್ಮಸಿಂಗ್ ನಾರಾಯಣಸಿಂಗ್
೧೧) ಕೆ. ಎನ್. ಕೋಳಿವಾಡ್
೧೨) ಬಿ. ಎಂ. ಇದಿನಬ್ಬ

''ಪ್ರಸ್ತಾವಕ್ಕೆ ಆನಂಪೋದನೆ ದೊರಕಿತು ಮತ್ತು ತಿದ್ದುಪಡಿ ವಿಧೇಯಕವನ್ನು ಎರಡೂ ಸದನದ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಶ್ರೀ ಬೈರೇಗೌಡರ ಟೇಪ್ ಬಗ್ಗೆ ರಿಪೋರ್ಟ್ ಇದ್ದು ಆದಷ್ಟು ಬೇಗ ಕ್ಯಾಬಿನೆಟ್ ಮೀಟಿಂಗ್ ಮಾಡಿ, ಈ ಸದನದಲ್ಲಿ ಇಡುತ್ತೇನೆ ಎಂದು ಹೇಳಿದರು. ಯಾವಾಗ ಇದನ್ನು ಇಡುತ್ತಾರೋ, ಗೊತ್ತಿಲ್ಲ, ಈಗಾಗಲೇ ೨-೩ ತಿಂಗಳಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಕ್ಯಾಬಿನೇಟ್ ಆಫ್ ಎನ್‌ಕ್ವೈರಿ ಆಕ್ಟ್ ಪ್ರಕಾರ ಇದನ್ನು ಮುಂಡಿಸಲು ಆರು ತಿಂಗಳ ಕಾಲಾವಧಿ ಇದೆ. ಇದು ೨-೩ ವಾರಗಳ ಹಿಂದೆ ಬಂತು. ಅದನ್ನು ಇನ್ನೂ ನಾವು ಕ್ಯಾಬಿನೆಟ್ ಮುಂದೆ ಇಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಬರಲಿಲ್ಲ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ರಿಪೋರ್ಟ್ ಈಗಾಗಲೇ ಬಂದಿದೆ, ಅದನ್ನು ಕ್ಯಾಬಿನೆಟ್ ಮುಂದೆ ಇಟ್ಟು ಸದನದ ಮುಂದೆ ಮಂಡಿಸುತ್ತೇವೆಂದು. ಬಹುಶಃ ನಾವು ಮಂಡಿನ ಸಲ ಸೇರುವ ಹೊತ್ತಿಗೆ ೪ ತಿಂಗಳು ಕಳೆದಿರುತ್ತದೆ. ಆದ್ದರಿಂದ ಇದರ ಬಗ್ಗೆ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಅದನ್ನು ತೀರ್ಮಾನ ಮಾಡಬೇಕು ಎಂಬ ಯೋಚನೆ ಇತ್ತು. ಅದನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಬರುವ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಅದನು ತೆಗೆದುಕೊಳ್ಳುತ್ತೇವೆ. ಅದರಲ್ಲಿ ಮುಚ್ಚು ಮರೆ ಮಾಡುವಂಥದ್ದು ಏನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸ್ವಲ್ಪ ಬೇಗನೆ ಬರಲಿ. ಎಲ್ಲರಿಗೂ ಗೊತ್ತಾಗಲಿ.